ಕರ್ನಾಟಕ ಸರ್ಕಾರ

# ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 7–1–2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | **ಲೋಕಾಯುಕ್ತ ದಿನಾಚರಣೆ:**<br>ಉದ್ಘಾಟನೆ:<br>ಶ್ರೀ ವಾಜುಬಾಯ್ ವಾಲಾ, ರಾಜ್ಯಪಾಲರು, ಕರ್ನಾಟಕ<br>ಅಧ್ಯಕ್ಷತೆ:<br>ನ್ಯಾಯಮೂರ್ತಿ ಡಾ. ವೈ. ಭಾಸ್ಕರ್ ರಾವ್, ಲೋಕಾಯುಕ್ತ, ಕರ್ನಾಟಕ<br>ಮುಖ್ಯ ಅತಿಥಿಗಳು:<br>ನ್ಯಾಯಾಮೂರ್ತಿ ಶ್ರೀ ವೆಂಕಟಾಚಲ, ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳು ಹಾಗೂ ನಿವೃತ್ತ ಲೋಕಾಯುಕ್ತರು, ಕರ್ನಾಟಕ. | 08–01–2015<br>ಗುರುವಾರ<br>ಬೆಳಗ್ಗೆ<br>9–30 ಗಂಟೆಗೆ | ಸಮ್ಮೇಳನ ಸಭಾಂಗಣ,<br>4ನೇ ಮಹಡಿ, ಲೋಕಾಯುಕ್ತ ಆವರಣ,<br>ಬಹುಮಹಡಿ ಕಟ್ಟಡ,<br>ಡಾ. ಬಿ.ಆರ್. ಅಂಬೇಡ್ಕರ್ ವೀಧಿ,<br>ಬೆಂಗಳೂರು – 560 001. |
| 2. | **ಮಾಧ್ಯಮಗಳಲ್ಲಿ ದಲಿತ ಸಂವೇದನೆ ವಿಶೇಷ ಕಾರ್ಯಾಗಾರ.**<br>ಉದ್ಘಾಟನೆ:<br>ಶ್ರೀ ಹೆಚ್. ಆಂಜನೇಯ, ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.<br>ಅಧ್ಯಕ್ಷತೆ:<br>ಶ್ರೀ ಆರ್. ರೋಷನ್ ಬೇಗ್, ಮೂಲಸೌಲಭ್ಯ ಅಭಿವೃದ್ಧಿ, ಹಜ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಖಾತೆ ಸಚಿವರು.<br>ಮುಖ್ಯ ಅತಿಥಿಗಳು:<br>ಶ್ರೀ ಎಲ್ ಹನುಮಂತಯ್ಯ, | 08–01–2015<br>ಗುರುವಾರ<br>ಬೆಳಗ್ಗೆ<br>11–00 ಗಂಟೆಗೆ | ಸಮ್ಮೇಳನ ಸಭಾಂಗಣ, ವಿಕಾಸಸೌಧ,<br>ಕೊಠಡಿ ಸಂಖ್ಯೆ 419, 4ನೇ ಮಹಡಿ,<br>ಬೆಂಗಳೂರು. |

| | | | |
|---|---|---|---|
| | ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ.<br>ಶ್ರೀ ಎನ್‌. ಆರ್‌. ವಿಶುಕುಮಾರ್‌, ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ. | | |

## ಪತ್ರಿಕಾ ಪ್ರಕಟಣೆ

## ಶುಕ್ರವಾರ ಸಚಿವ ಸಂಪುಟ ಸಭೆ

**ಬೆಂಗಳೂರು, ಜನವರಿ 7 (ಕರ್ನಾಟಕ ವಾರ್ತೆ)**

ರಾಜ್ಯ ಸಚಿವ ಸಂಪುಟದ ಸಭೆಯು ಜನವರಿ 9 ರಂದು ಬೆಳಿಗ್ಗೆ 11–00 ಗಂಟೆಗೆ ವಿಧಾನಸೌಧದ ಮೂರನೇ ಮಹಡಿಯಲ್ಲಿರುವ ಸಚಿವ ಸಂಪುಟದ ಸಭಾಮಂದಿರದಲ್ಲಿ ನಡೆಯಲಿದೆ.

ಪಹೊ:ಬಾಬು:ಜಿಪಿಆರ್‌.

## ಮಾಲಾರ್ಪಣೆ

**ಬೆಂಗಳೂರು, ಜನವರಿ 7 (ಕರ್ನಾಟಕ ವಾರ್ತೆ)**

ದೇಶದ ಮಾಜಿ ಪ್ರಧಾನ ಮಂತ್ರಿ ದಿ. ಲಾಲ್‌ಬಹದ್ದೂರ್‌ ಶಾಸ್ತ್ರಿಯವರ 49ನೇ ಪುಣ್ಯತಿಥಿ ಅಂಗವಾಗಿ ಜನವರಿ 11 ರ ಭಾನುವಾರ ಬೆಳಿಗ್ಗೆ 10–00 ಗಂಟೆಗೆ ವಿಧಾನಸೌಧದ ಪಶ್ಚಿಮ ದಿಕ್ಕಿನಲ್ಲಿರುವ ಅವರ ಪ್ರತಿಮೆ ಬಳಿ ಶಾಸ್ತ್ರೀಜಿ ಅವರ ಭಾವಚಿತ್ರಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಮಾಲಾರ್ಪಣೆ ಮಾಡುವರು.

ಪಹೊ:ಬಾಬು:ಜಿಪಿಆರ್‌.

## ಪರೀಕ್ಷೆ ಮುಂದೂಡಿಕೆ

**ಬೆಂಗಳೂರು, ಜನವರಿ 7 (ಕರ್ನಾಟಕ ವಾರ್ತೆ)**

2015 ರ ಜನವರಿ 12 ರಿಂದ 22 ರವರೆಗೆ ನಡೆಯಬೇಕಿದ್ದ ಕರ್ನಾಟಕ ಮುಕ್ತ ಶಾಲೆ (ಕೆ.ಒ.ಎಸ್‌.) ಪರೀಕ್ಷೆಯನ್ನು ಕಾರಣಾಂತರಗಳಿಂದ ಮುಂದೂಡಲಾಗಿದೆ. ಕರ್ನಾಟಕ ಮುಕ್ತ ಶಾಲೆ ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳು, ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರು ಪರೀಕ್ಷೆ ಮುಂದೂಡಿಕೆಯನ್ನು ಗಮನಿಸಲು ಕೋರಿದೆ ಎಂದು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಪ್ರಕಟಣೆ ತಿಳಿಸಿದೆ.

ಪಹೊ:ಬಾಬು:ಜಿಪಿಆರ್‌.

# EXAMINATIONS POSTPONED

Bangalore, January 7 (Karnataka Information)

**Karnataka Open School (KOS) Examination, Scheduled from 12-01-2015 to 22-01-2015 has been postponed, due to unavoidable circumstances.**

**Director (Other Exams), Karnataka Secondary Education Examination Board, Bangalore has said that revised Time table will be published later for the kind notice of Co-ordinator of Karnataka Open School Study Centers, students, parents and public.**

ph/babu/gpr

# ಜೀವನ ರಕ್ಷಾ ಪ್ರಶಸ್ತಿ ಪ್ರದಾನ

ಬೆಂಗಳೂರು, ಜನವರಿ 7 (ಕರ್ನಾಟಕ ವಾರ್ತೆ)

ಭಾರತ ಸರ್ಕಾರವು ನೀಡುವ "ಉತ್ತಮ ಜೀವನ ರಕ್ಷಾ ಪ್ರಶಸ್ತಿ 2013"ರ ಪದಕವನ್ನು ಬೆಂಗಳೂರಿನ ಶ್ರೀ ಶಾಶ್ವತ್‌ರಾಜ್ ಅವರಿಗೆ ಇಂದು ರಾಜ್ಯ ಗೃಹ ಖಾತೆ ಸಚಿವ ಶ್ರೀ ಕೆ.ಜೆ. ಜಾರ್ಜ್ ಅವರು ವಿಧಾನ ಸೌಧದಲ್ಲಿ ಪ್ರಧಾನ ಮಾಡಿದರು.

ವಿಧಾನ ಸೌಧದ ಸಮಿತಿ ಕೊಠಡಿಯಲ್ಲಿ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಗೃಹ ಸಚಿವರು ಕೆ.ಆರ್. ನಗರ ತಾಲ್ಲೂಕಿನ ಮೂಲೆಬೆಟ್ಟು ಗ್ರಾಮದ ಹತ್ತಿರದ ಲಕ್ಷ್ಮಣ ತೀರ್ಥ ನದಿಯಲ್ಲಿ ಮೂರು ಜನರು ಮುಳುಗುತ್ತಿದ್ದುದನ್ನು ಕಂಡು ತನ್ನ ಜೀವನದ ಹಂಗು ತೊರೆದು ಕೂಡಲೇ ನದಿಗೆ ದುಮುಕಿ ಮೂರು ಜನರ ಪ್ರಾಣ ಉಳಿಸಿದ ಕೀರ್ತಿಗೆ ಶ್ರೀ ಶಾಶ್ವತ್‌ರಾಜ್ ಅವರು ಪಾತ್ರರಾಗಿದ್ದಾರೆ ಎಂದರು, ಪ್ರಶಸ್ತಿಯು 60,000 ರೂ. ನಗದು, ಪದಕ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ. ಸಮಾರಂಭದಲ್ಲಿ ಗೃಹ ಸಚಿವರ ಸಲಹೆಗಾರರಾದ ಶ್ರೀ ಕೆಂಪಯ್ಯ, ಸರ್ಕಾರದ ಅಪರ ಕಾರ್ಯದರ್ಶಿಗಳು ಹಾಗೂ ಒಳಾಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಸ್.ಕೆ. ಪಟ್ನಾಯಕ್ ಹಾಗೂ ಗೃಹ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಕೋಳಿ ಸಾಕಾಣಿಕೆ ತರಬೇತಿ

ಬೆಂಗಳೂರು, ಜನವರಿ 7 (ಕರ್ನಾಟಕ ವಾರ್ತೆ)

**ರಾಜ್ಯ ಕೋಳಿ ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಹೆಸರಘಟ್ಟ, ಇಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖಾವತಿಯಿಂದ ಜನವರಿ 19 ರಿಂದ 24 ರವರೆಗೆ 06 ದಿನಗಳ ಕೋಳಿ ಸಾಕಾಣಿಕೆಯ ಬಗ್ಗೆ ತರಬೇತಿಯನ್ನು ಏರ್ಪಡಿಸಲಾಗಿದೆ. ಇಚ್ಛೆಯುಳ್ಳವರು ಸದರಿ ತರಬೇತಿಗೆ ಹಾಜರಾಗಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು 080- 28466093 ನ್ನು ಸಂಪರ್ಕಿಸಲು ರಾಜ್ಯ ಕೋಳಿ ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಹೆಸರಘಟ್ಟ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

## ವಾರ್ತಾ ವಿಶೇಷ:

## ಹಿಂದುಳಿದ ವರ್ಗಗಳ ಆಯೋಗದಿಂದ ನಡೆಸುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ.

ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ಸಮಾಜದ ಎಲ್ಲ ವರ್ಗಗಳಿಗೆ ನೀಡುವುದು ಸರ್ಕಾರದ ಕರ್ತವ್ಯ. ಭಾರತ ಸಂವಿಧಾನದ ಪರಿಚ್ಛೇದ 15 ಮತ್ತು 16 ರನ್ವಯ ಅಸಮಾನತೆಯನ್ನು ಸರಿಪಡಿಸುವ ಸೃಷ್ಟಿಯಿಂದ ಶಿಕ್ಷಣ, ಉದ್ಯೋಗ, ರಾಜಕೀಯ ಪ್ರಾತಿನಿಧ್ಯ – ಇತ್ಯಾದಿ ರಂಗಗಳಲ್ಲಿ ಮೀಸಲತಿ ನೀತಿಯ ಮೂಲಕ ಶೋಷಿತ ವರ್ಗಗಳಿಗೆ ಸೌಲಭ್ಯವನ್ನು ನೀಡುವಲ್ಲಿ ಆದ್ಯತೆ ನೀಡಲು ಅವಕಾಶವಿರುತ್ತದೆ. ದುರ್ಬಲ ವರ್ಗಗಳಿಗೆ, ದೀನದಲಿತರಿಗೆ ಹಾಗೂ ಹಿಂದುಳಿದ ವರ್ಗಗಳ ಶ್ರೇಯೋಭಿವೃದ್ಧಿಗಾಗಿ ವಿಶಿಷ್ಠ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿಕೊಂಡು ಬಂದಿರುವ ಭವ್ಯ ಪರಮಪರೆ ಕರ್ನಾಟಕ ರಾಜ್ಯದಲ್ಲಿ ಹಿಂದಿನಿಂದಲೂ ಇದೆ. ಆದಾಗ್ಯೂ, ಅತಿ ಹಿಂದುಳಿದ ಮತ್ತು ನಿರ್ಲಕ್ಷ್ಯಕ್ಕೊಳಗಾದ ವರ್ಗಗಳಿಗೆ ಸೇರಿದ ಬಡಕುಟುಂಬಗಳ ಸಾಮಾಜಿಕ ಸ್ಥಾನಮಾನ, ಶೈಕ್ಷಣಿಕ ಮಟ್ಟ ಮತ್ತು ಆರ್ಥಿಕ ಸ್ಥಿತಿಯನ್ನು ಸುಭದ್ರಗೊಳಿಸಿ ಅವರನ್ನು ಅಭಿವೃದ್ಧಿ ಮಾರ್ಗದ ಮುಂಚೂಣಿಯಲ್ಲಿ ತರುವುದು ನಮ್ಮ ಸರ್ಕಾರದ ಧ್ಯೇಯ.

ಹಿಂದುಳಿದ ವರ್ಗಗಳಿಗೆ ಸೇರಿದ ದುರ್ಬಲ ಕುಟಂಬಗಳ ಮೇಲೆ ಕೇಂದ್ರೀಕರಿಸುವ ವಿಶಿಷ್ಠ ಕಾರ್ಯಕ್ರಮಗಳನ್ನು ರೂಪಿಸುವ ಚಿಂತನೆ ಸರ್ಕಾರಕ್ಕಿದೆ. ಇದಕ್ಕಾಗಿ ವಿವಿದ ಜಾತಿ, ವರ್ಗ, ಮತ, ಸಮೂಹಗಳ ಸಾಮಾಜಿಕ, ಶೈಕ್ಷಣಿಕ ಪರಿಸ್ಥಿತಿ, ರಾಜಕೀಯ ಪ್ರಾತಿನಿಧ್ಯ ಲಭ್ಯತೆ, ಅವರ ಇಂದಿನ ಜೀವನ ಮಟ್ಟ ಇತ್ಯದಿ ಅಂಶಗಳ ಕುರಿತು ಆಳವಾದ ಅಧ್ಯಯನ ಹಾಗೂ ವಿಶ್ಲೇಷಣೆ ಮಾಡುವ ಅಗತ್ಯವಿದೆ. ಈ ನಿಟ್ಟಿನಲ್ಲಿ, ರಾಜ್ಯಾದ್ಯಂತ ಎಲ್ಲ್ಲ ಕುಟುಂಬಗಳ ಹಾಗೂ ಎಲ್ಲ ಜನರ ಸ್ಥಿತಿಗತಿಗಳನ್ನು ಗುರುತಿಸುವುದಕ್ಕಾಗಿ ಒಂದು ಸಮಗ್ರ ಸಮೀಕ್ಷೆ ನಡೆಸುವುದು ಬಹಳ ಮುಖ್ಯವೆಂದು ನಾನು ಭಾವಿಸಲಾಗಿದೆ.

ಸಮಾಜದಲ್ಲಿರುವ ಜಾತಿ ಪದ್ಧತಿ, ಜಾತಿ-ಧರ್ಮಗಳ ನಡುವಿನ ತಾರತಮ್ಯಗಳನ್ನು ನಿರ್ಮೂಲನಗೊಳಿಸುವುದು ಪ್ರಗತಿಪರ ಚಿಂತನೆಯಾಗಿಸಬಹುದು. ಆದಾಗ್ಯೂ, ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಜಾತಿ-ಜನಾಂಗಗಳ ಅಭಿವೃದ್ಧಿ ಕೂಡ ಇನ್ನೂ ಶ್ರೇಣೀಕೃತ ಸ್ಥಿತಿಯಲ್ಲೇ ಇರುವುದು ವಾಸ್ತವ ಸ್ಥಿತಿ. ಇಂತಹ ತಾರತಮ್ಯ-ಅಸಮಾನತೆಗಳನ್ನು ಸರಿಪಡಿಸುವ ನಿಟ್ಟನಲ್ಲಿ ನಿರ್ಧಿಷ್ಟ ಕಾರ್ಯಕ್ರಮಗಳನ್ನು ಜಾರಿಗೆ ತರುವ ಮುನ್ನ ಕರ್ನಾಟಕ ರಾಜ್ಯದಲ್ಲಿರುವ ಎಲ್ಲ ಜಾತಿ-ಸಮುದಾಯಗಳಿಗೆ ಸೆರದ ಕುಟುಂಬಗಳ ಹಗೂ ಪ್ರಜೆಗಳ ಸ್ಥಿತಿಗತಿಗಳನ್ನರಿಯುವ ಸಮಗ್ರ ಸಮೀಕ್ಷೆ ನಡೆಸುವುದು ಅನಿವಾರ್ಯವಾಗಿದೆ.

ಭಾರತ ದೇಶದಲ್ಲಿ ಮೊಟ್ಟಮೊದನೆಯದಾಗಿ ಜಾತಿವಾರು ಹಣತಿ 1872 ರಲ್ಲಿ ಪ್ರಾರಂಭವಾಗಿ ದಶವಾರ್ಷಿಕ ಜಾತಿವಾರು ಜನಗಣತಿ 1931 ರವರೆಗೆ ನಡೆದಿದ್ದು, ನಂತರ ನಡೆದಿರುವುದಿಲ್ಲ. ಮಂಡಲ್ ಆಯೋಗದ ವರದಿಗೆ ಸಂಬಂಧಿಸಿದಂತೆ ದಿ:16.11.1992 ರಂದು ಮಾನ್ಯ ಸರ್ವೋಚ್ಛ ನ್ಯಾಯಾಲಯವು ನೀಡಿರುವ ತೀರ್ಪಿನನ್ವಯ ಪ್ರತಿಯೊಂದು ರಾಜ್ಯದಲ್ಲಿಯೂ ಶಾಶ್ವತವಾಗಿ ಹಿಂದುಳಿದ ವರ್ಗಗಳ

ಆಯೋಗದ ರಚನೆಯಾಗಿದೆ. ಆಯೋಗಗಳು ಜಾತಿವಾರು ಸಮೀಕ್ಷೆಯನ್ನು ನಡೆಸಿ ಹಿಂದುಳಿದ ವರ್ಗಗಳನ್ನು ಗುರುತಿಸುವುದು ಆಯೋಗಗಳ ಪ್ರಮುಖ ಕಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು "ಇಂದ್ರ ಸಹಾನಿ" ಪ್ರಕರಣದಲ್ಲಿ ನೀಡಿರುವ ನಿರ್ದೇಶನದ ಪ್ರಕಾರ ನಮ್ಮ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಲಾಗಿದೆ. ಶ್ರೀ.ಹೆಚ್.ಕಾಂತರಾಜ್ ರವರ ಅಧ್ಯಕ್ಷತೆಯಲ್ಲಿ ರಚಿತವಾದ 5 ಸದಸ್ಯರನ್ನೊಳ ಗೊಂಡ ಆಯೋಗ ಕಾರ್ಯನಿರತವಾಗಿದೆ.

ನಮ್ಮ ಸರ್ಕಾರ ಹೊಂದಿರುವ ದೃಢವಾದ ಇಚ್ಛಾಶಕ್ತಿಯ ಹಿನ್ನೆಲೆಯಲ್ಲಿ ರಾಜ್ಯದ ಸಂಪೂರ್ಣ ಜನಸಂಖ್ಯೆ ಹಾಗೂ ಕುಟುಂಬಗಳಿಗೆ ಅನ್ವಯಿಸುವಂತೆ, ಸಮಗ್ರವಾದ ಮತ್ತು ವೈಜ್ಞಾನಿಕವಾದ ಸಾಮಜಿಕ ಮತ್ತು ಶೈಕ್ಷಣಿಕ ಜಾತಿವಾರು ಸಮೀಕ್ಷೆಯನ್ನು ನಡೆಸಲು ನಿರ್ಧರಿಸಲಾಗಿದೆ.

ಈ ಸಮೀಕ್ಷೆಯಲ್ಲಿ, ರಾಜ್ಯದ ಪ್ರತಿಯೊಂದು ಕುಟುಂಬಕ್ಕೆ ಸೇರಿದ ವ್ಯಕ್ತಿಗಳ ಕುರಿತು ಸಾಮಾಜಿಕ-ಶೈಕ್ಷಣಿಕ ಸ್ಥಿತಿಗತಿ, ಔದ್ಯೋಗಿಕ-ಆರ್ಥಿಕ ಸ್ಥಿತಿಗತಿ, ರಾಜಕೀಯ ಪ್ರಾತಿನಿಧ್ಯ ಇತ್ಯಾದಿ ಅಂಶಗಳ ಮೇಲೆ ನಿಖರವಾದ ಮಾಹಿತಿಗಳನ್ನು ಸಂಗ್ರಹಿಸಲಾಗುವುದು. ಸಮೀಕ್ಷೆಯಲ್ಲಿ ಬಿಂಬಿತವಾಗುವ ಮಾಹಿತಿಗಳು ಹಾಗೂ ಇತರ ಮಾಹಿತಿಗಳು ಮತ್ತು ವರದಿಗಳ ಹಿನ್ನೆಲೆಯಲ್ಲಿ, ಆಯಾ ಜಾತಿ-ಸಮುದಾಯಗಳ ಜನಸಂಖ್ಯೆ ಮತ್ತು ಹಿಂದುಳಿದಿರುವಿಕೆ ಗಳನ್ನಾಧರಿಸಿ, ಅವರ ಶ್ರೇಯೋಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ರೂಪಿಸಲಾಗುವುದು. ಈ ಸಮೀಕ್ಷೆ ಒಂದು ಬೃಹತ್ ಕಾರ್ಯಾಚರಣೆಯಾಗಿದ್ದು, ರಾಜ್ಯದ ಎಲ್ಲ ಕುಟುಂಬಗಳು ಹಾಗೂ ಜನರನ್ನು ಸಮೀಕ್ಷೆಗೆ ಒಳಪಡಿಸಲಾಗುವುದು.

ಅಂಕಿ ಅಂಶಗಳು:

| | |
|---|---|
| – ಒಟ್ಟು ಅಂದಾಜು ಕುಟುಂಬಗಳು | 1.28 ಕೋಟಿ |
| – ಅಂದಾಜು ಜನಸಂಖ್ಯೆ | 6.35 ಕೋಟಿ |
| – ಸಮೀಕ್ಷಾ / ಗಣತಿ ಬ್ಲಾಕುಗಳು | 1.26 ಲಕ್ಷ |
| – ಗ್ರಾಮೀಣ ಗಣತಿ ಚಾರ್ಜುಗಳು | 176 (ತಾಲ್ಲೂಕು) |
| – ನಗರ ಚಾರ್ಜುಗಳು | 352 (ನಗರ / ಪುರಸಭೆ) |
| – ಬಿಬಿಎಂಪಿ ಚಾರ್ಜುಗಳು | 199 (ವಾರ್ಡುಗಳು) |

- ಸಮೀಕ್ಷೆ ನಡೆಸಲು ನೇಮಕ ಆಗಿರುವ ಅಧಿಕಾರಿಗಳು / ಸಿಬ್ಬಂದಿಗಳು

| |
|---|
| – 30 ಜಿಲ್ಲಾಧಿಕಾರಿಗಳು |
| – ಬಿಬಿಎಂಪಿ ಆಯುಕ್ತರು / 8 ವಲಯಗಳ ಜಂಟಿ ಆಯುಕ್ತರು |
| – 30 ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು |
| – 10 ಮಹಾನಗರ ಪಾಲಿಕೆಗಳ ಆಯುಕ್ತರು |
| – 30 ಜಿಲ್ಲೆಗಳ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು |
| – 30 ಜಿಲ್ಲೆಗಳ ಸಾಂಖ್ಯಿಕ ಅಧಿಕಾರಿಗಳು |
| – 76 ಉಪ ವಿಭಾಗಗಳ ಅಸಿಸ್ಟೆಂಟ್ ಕಮೀಷನರ್‌ಗಳು |

| |
|---|
| – 176 ತಹಸೀಲ್ದಾರರು |
| – 551 ಬಿ.ಬಿ.ಎಂ.ಪಿ./ನಗರಸಭೆ/ಪುರಸಭೆ/ಪಟ್ಟಣ ಪಂಚಾಯತ್‌ಗಳ ಆಯುಕ್ತರು /ಮುಖ್ಯಾಧಿಕಾರಿಗಳು |
| – 40 ಸಂಪನ್ಮೂಲ ವ್ಯಕ್ತಿಗಳು |
| – 2,718 ಮಾಸ್ಟರ್ ಟ್ರೈನರ್ಸ್ |
| – 22,189 ಸಮೀಕ್ಷಾ ಮೇಲ್ವಿಚಾರಕರು |
| – 1.33 ಲಕ್ಷ ಗಣತಿದಾರರು |

- **ಸಮೀಕ್ಷೆಯಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಶಿಕ್ಷಕರನ್ನು ಉಪಯೋಗಿಸಿಕೊಳ್ಳುವ ಬಗ್ಗೆ ಆದೇಶ ಹೊರಡಿಸಲಾಗಿದೆ.**

| |
|---|
| – ಶಿಕ್ಷಣ ಹಕ್ಕು ಕಾಯ್ದೆಯಲ್ಲಿ – ಶಿಕ್ಷಣೇತರ ಉದ್ದೇಶಗಳಿಗಾಗಿ ಶಿಕ್ಷಕರನ್ನು ನಿಯೋಜಿಸಬಾರದೆಂದು ನಿರ್ಬಂಧವಿದೆ. |
| – ಗಣತಿಗಾಗಿ 1.33 ಲಕ್ಷ ಗಣತಿದಾರರು ಬೇಕಾಗಿರುವುದರಿಂದ, ಅನಿವಾರ್ಯವಾಗಿ ಉಪಯೋಗಿಸಬೇಕಾಗಿದೆ. |
| – ಶಿಕ್ಷಕರಿಗೆ ದಶವಾರ್ಷಿಕ ಜನಗಣತಿ ಮಾಡಿದ ಅನುಭವವಿದೆ. |
| – ರಜಾ ಅವಧಿಯಲ್ಲಿ (ಏಪ್ರಿಲ್ 11 – ಏಪ್ರಿಲ್ 30) 20 ದಿನಗಳ ಸೀಮಿತ ಅವಧಿಗೆ ಮಾತ್ರ, ಶೈಕ್ಷಣಿಕ ಕಾರ್ಯಕ್ರಮಗಳಿಗೆ ಬಾಧಕವಾಗದಂತೆ, ನಿಯೋಜಿಸಲಾಗುತ್ತಿದೆ. |
| – ಸಂಭಾವನೆಯನ್ನು ರೂ.5,500/- ರಿಂದ ರೂ.6,000/- ಗಳಿಗೆ ಹೆಚ್ಚಿಸಲಾಗಿದೆ. |
| – ಶಿಕ್ಷಕರ ಸಂಘ / ಸಂಸ್ಥೆಗಳ ಸಹಕಾರ ಕೋರಲಾಗಿದೆ. |

- **ಸಮೀಕ್ಷೆಗೆ ತಗಲುವ ವೆಚ್ಚ**

| | |
|---|---|
| – ಒಟ್ಟು ಅಂದಾಜು ವೆಚ್ಚ<br>(ಮೊದಲು ನಿಗದಿತವಾದದ್ದು) | ರೂ.175.00 ಕೋಟಿ<br><br>(117.00 ಕೋಟಿ) |
| – ಸಮೀಕ್ಷಾ ಸಿಬ್ಬಂದಿ / ಗಣತಿದಾರರಿಗೆ ಸಂಭಾವನೆ | ರೂ.90.00 ಕೋಟಿ |
| – ಬಿ.ಇ.ಎಲ್ ಸಂಸ್ಥೆಗೆ<br>(ಸಾಫ್ಟ್‌ವೇರ್ ಅಭಿವೃದ್ಧಿ / ಗಣಕೀಕರಣ) | ರೂ.43.00 |

ಹೆಚ್ಚುವರಿಯಾಗಿ ಬೇಕಾಗಿರುವ ರೂ.84.00 ಕೋಟಿಗಳನ್ನು ಪೂರಕ ಆಯವ್ಯಯದಲ್ಲಿ ಒದಗಿಸಲಾಗಿದೆ. ಇನ್ನು ಬೇಕಾಗುವ ರೂ.58.00 ಕೋಟಿಗಳನ್ನು 2015-16ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗುವುದು. ದೊಡ್ಡ ಪ್ರಮಾಣದ ವೆಚ್ಚದಲ್ಲಿ ಸಮೀಕ್ಷೆಯನ್ನು ನಡೆಸಲಾಗುತ್ತಿದೆ. ಆದ ಕಾರಣ ಸಮೀಕ್ಷೆ ಸಂಪೂರ್ಣವಾಗಿ ಯಶಸ್ವಿಯಾಗಬೇಕು. ಎಲ್ಲ ಅಧಿಕಾರಿಗಳು, ಸಿಬ್ಬಂದಿಗಳು, ಮೇಲ್ವಿಚಾರಕರು ಹಾಗೂ ಗಣತಿದಾರರು ಅತ್ಯಂತ ಶ್ರದ್ಧೆ ಮತ್ತು ಸಂಪೂರ್ಣ ಬದ್ಧತೆಯೊಂದಿಗೆ ಹಾಗೂ ಉತ್ಸಾಹದಿಂದ ಕೆಲಸ

ಮಾಡಬೇಕು. ಸಮೀಕ್ಷೆಯಲ್ಲಿ ಸಂಗ್ರಹಿಸುವ ಮಾಹಿತಿಗಳು ನಿಖರವಾಗಿರುವಂತೆ ಮತ್ತು ಪರಿಪೂರ್ಣವಾಗಿರುವಂತೆ ಎಲ್ಲ ರೀತಿಯ ಕಾಳಜಿ ವಹಿಸಿ, ನಾವು ಕೈಗೊಳ್ಳುವ ಸಮೀಕ್ಷೆಯು ರಾಷ್ಟ್ರದಲ್ಲಿಯೇ ಮಾದರಿಯಾಗಬೇಕು ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಶ್ರೀ ಹೆಚ್. ಕಾಂತರಾಜು ತಿಳಿಸಿದ್ದಾರೆ.

ಪಹೊ/ಬಾಬು/ಕೆಎಂ

## ಪ.ಜಾ ವಿದ್ಯಾರ್ಥಿನಿಲಯ ಪ್ರಕಟಣೆ

**ಬೆಂಗಳೂರು, ಜನವರಿ 7 (ಕರ್ನಾಟಕ ವಾರ್ತೆ)**

ರಾಜ್ಯದಲ್ಲಿ ಪರಿಶಿಷ್ಟ ಜಾತಿಯ ಧಾರ್ಮಿಕ ಸಂಸ್ಥೆಗಳು/ ಸಂಘ ಸಂಸ್ಥೆಗಳು/ ಸ್ವಯಂ ಸೇವಾ ಸಂಸ್ಥೆಗಳು/ ಟ್ರಸ್ಟ್‌ಗಳು ನಡೆಸುವ ವಿದ್ಯಾರ್ಥಿನಿಲಯಗಳು, ಶಾಲಾ ಕಾಲೇಜುಗಳು ಹಾಗೂ ಸಮುದಾಯ ಭವನಗಳ ಕಟ್ಟಡಗಳ ನಿರ್ಮಾಣಕ್ಕೆ ಸಹಾಯ ಧನ ನೀಡುವ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ:ಸಕಇ 44 ಪಕವಿ 2014, ದಿನಾಂಕ:15.05.2014 ರಲ್ಲಿ ಮಾರ್ಗಸೂಚಿಗಳನ್ನು ಪರಿಷ್ಕರಿಸಿ ಆದೇಶ ಹೊರಡಿಸಿರುತ್ತದೆ.

ಈ ಆದೇಶ ಹಾಗೂ ಅದರೊಂದಿಗಿನ ಅನುಬಂಧ 1 ರಿಂದ 4 ರವರೆಗಿನ ಮಾರ್ಗಸೂಚಿಗಳನ್ನು ಇಲಾಖೆಯ ವೆಬ್‌ಸೈಟ್ ವಿಳಾಸ: **www.sw.kar.nic.in** ನಲ್ಲಿ ತಿಳಿಯಬಹುದಾಗಿದ್ದು, ಸದರಿ ಯೋಜನೆಯಡಿ ಸಹಾಯಧನ ಕೋರಲು ಇಚ್ಛಿಸುವ ಆಸಕ್ತ ಸಂಘ-ಸಂಸ್ಥೆಗಳು ಅಗತ್ಯ ದಾಖಲಾತಿಗಳೊಂದಿಗೆ ಸಂಬಂಧಪಟ್ಟ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಕಾರ್ಯಾಲಯಕ್ಕೆ ಈ ಪ್ರಕಟಣೆ ನೀಡಿದ ದಿನಾಂಕದಿಂದ 30 ದಿನಗಳ ಒಳಗಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲೆಯ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು/ ತಾಲ್ಲೂಕು ಸಮಾಜ ಕಲ್ಯಾಣಾಧಿಗಳ ಕಛೇರಿಯನ್ನು ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆ ಆಯುಕ್ತ ಎಸ್.ಎನ್. ಜಯರಾಮ್ ತಿಳಿಸಿದ್ದಾರೆ.

## ಸಾಹಿತಿ ಹಾಗೂ ಕಲಾವಿದರ ಮಾಸಾಶನ ಹೆಚ್ಚಳ

**ಬೆಂಗಳೂರು, ಜನವರಿ 7 (ಕರ್ನಾಟಕ ವಾರ್ತೆ)**

ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಹಿರಿಯ ಸಾಹಿತಿ/ಕಲಾವಿದರಿಗೆ ಪ್ರಸ್ತುತ ನೀಡುತ್ತಿರುವ ರೂ. 1,000/- ಗಳ ಮಾಸಾಶನವನ್ನು ರೂ. 1,500/-ಕ್ಕೆ ಹೆಚ್ಚಿಸಿ ಆದೇಶ ಹೊರಡಿಸಿದೆ.

ಪ್ರಸ್ತುತ ಈ ಮಾಸಾಶನದ ಫಲಾನುಭವಿಗಳಾಗಿರುವ ಸುಮಾರು 18 ಸಾವಿರ ಸಾಹಿತಿ/ ಕಲಾವಿದರು ಬಹುದಿನಗಳಿಂದ ಮಾಸಾಶನದ ಮೊತ್ತವನ್ನು ರೂ.2,000/- ಗಳಿಗೆ ಹೆಚ್ಚಿಸುವಂತೆ ಕೋರಿದ ಬೇಡಿಕೆಯನ್ನು ಪರಿಗಣಿಸಿ ರಾಜ್ಯ ಸರ್ಕಾರವು ದಿನಾಂಕ 08-12-2014ರಂದು ಮಾಸಾಶನದ ಮೊತ್ತವನ್ನು ರೂ. 1,500/- ಕ್ಕೆ ಹೆಚ್ಚಿಸಲು ಮಂಜೂರಾತಿ ನೀಡಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.